ರಾಜ್ಯ ಪೊಲೀಸ್ ಸಿಬ್ಬಂದಿ ಬಲವನ್ನು ಹೆಚ್ಚಿಸುವುದು.

1762. ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರಾಜ್ಯ ಪೋಲೀಸ್ ಸಿಬ್ಬಂದಿ ಬಲವನ್ನು ಹೆಚ್ಚಿಸಲು ನಿರ್ಧರಿಸಿದೆಯೇ? ಹಾಗಿದ್ದಲ್ಲಿ ಎಷ್ಟು ಹೆಚ್ಚಿಗೆ ಮಾಡಲಾಗುವುದು.

ಆ) ಪೋಲೀಸ್ ಸಿಬ್ಬಂದಿಯ ನೇಮಕಾತಿಯನ್ನು ಹೇಗೆ ಮಾಡಲಾಗುವುದು?

ಇ) ಪೋಲೀಸ್ ಸಿಬ್ಬಂದಿಯ ನೇಮಕಾತಿಯಲ್ಲಿ ಸರ್ಕಾರವು ಅಲ್ಪಸಂಖ್ಯಾತರಿಗೆ ಪ್ರತಿನಿಧಿಸಲು ಅದರಲ್ಲಿಯೂ ಮುಸ್ಲಿಮರಿಗೆ ಮತ್ತು ಕ್ರಿಶ್ಚಿಯನ್ನರಿಗೆ ಯಾವುದೇ ಪ್ರಮಾಣವನ್ನು ನಿಗಧಿಪಡಿಸುವುದೇ?

ಈ) ಎಲ್ಲಾ ಜನಾಂಗ (ಅಂದರೆ ಮುಸ್ಲಿಮ್ ಕ್ರಿಶ್ಚಿಯನ್. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ)ಗಳ ಸೂಕ್ತ ಪ್ರಾತಿನಿಧ್ಯವಿಲ್ಲದಿರುವುದರಿಂದ. ಆ ಜನಾಂಗಗಳ ವ್ಯಕ್ತಿಗಳಿಗೆ ಅನ್ಯಾಯನಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಪರಿಸ್ಥಿತಿಯನ್ನು ತಪ್ಪಿಸಲು ತೆಗೆದುಕೊಳ್ಳುವ ಕ್ರಮಗಳಾವುವು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು.

ಸರ್ಕಾರವು ಸಿವಿಲ್ ಪೋಲೀಸ್ ಮಹಿಳಾ ಪೋಲೀಸ್ ಮತ್ತು ಸಶಸ್ತ್ರ ಪೋಲೀಸ್ ಸಿಬ್ಬಂದಿಗೆ ಸಂಬಂಧಿಸಿದಂತೆ ಹೆಚ್ಚಿನ ಸಿಬ್ಬಂದಿ ಬಲವನ್ನು ಹಂತ ಹಂತವಾಗಿ ಮಂಜೂರು ಮಾಡಲು ಒಪ್ಪಿಗೆ ನೀಡಿರುತ್ತದೆ. ವಿವರ ಕೆಳಕಂಡಂತಿದೆ.

ಹುದ್ದೆ	ಸಿವಿಲ್ ಪೊಲೀಸ್	ಮಹಿಳಾ ಪೊಲೀಸ್	ಸಶಸ್ತ್ರ ಪೊಲೀಸ್
ಆರಕ್ಷಕ ಅಧೀಕ್ಷಕರು	-	-	12
ಉಪ ಆರಕ್ಷಕ ಅಧೀಕ್ಷಕರು	-	-	27
ಆರಕ್ಷಕ ನಿರೀಕ್ಷಕರು	-	5	36
ಆರಕ್ಷಕ ಉಪ ನಿರೀಕ್ಷಕರು	149	46	108
ಸಹಾಯಕ ಆರಕ್ಷಕ ಉಪ ನಿರೀಕ್ಷಕರು	1116	80	146
ಮುಖ್ಯ ಪೇದೆ	2389	240	1088
ಪೋಲೀಸ್ ಪೇದೆ	3769	704	4797

ಆ) ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಸಂಬಂಧಿಸಿದಂತೆ ಈ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲಾಗುವುದು. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ನೇಮಕಾತಿ ಪ್ರಾಧಿಕಾರವು ತರಿಸಿಕೊಂಡು.

ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿದ ವಿಧಾನಗಳಿಗನುಗುಣವಾಗಿ ನೇಮಕಾತಿ ಮಾಡಿಕೊಳ್ಳಲಾಗುವುದು.

ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಸಂಬಂಧಿಸಿದಂತೆ 66 2/3% ಹುದ್ದೆಗಳನ್ನು ನೇರ ನೇಮಕಾತಿಯಿಂದಲೂ 33 1/3% ಹುದ್ದೆಗಳನ್ನು ಸಹಾಯಕ ಪೋಲೀಸ್ ಸಬ್ ಇನ್ಸ್‌ಪೆಕ್ಟರ್/ಪೋಲೀಸ್ ಹೆಡ್ ಕಾನ್ಸ್‌ಟೇಬಲ್ ಹುದ್ದೆಗಳಿಂದ ತುಂಬಲಾಗುವುದು. ಈ ಕಳಕಾಣಿಸಿದ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್‌ರವರ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ:74:ಪಿಇಐ :91. ದಿನಾಂಕ 17-12-1991ರಲ್ಲಿ ನೇಮಕಾತಿ ಸಮಿತಿಯನ್ನು ರಚಿಸಿ. ಅಧಿಸೂಚನೆ ಹೊರಡಿಸಲಾಗಿದೆ.

1) ಪೋಲೀಸ್ ಸಬ್ ಇನ್ಸ್‌ಪೆಕ್ಟರ್. ಸಿವಿಲ್
2) ಪೋಲೀಸ್ ಸಬ್ ಇನ್ಸ್‌ಪೆಕ್ಟರ್. ಸಿಎಆರ್
3) ಪೋಲೀಸ್ ಸಬ್ ಇನ್ಸ್‌ಪೆಕ್ಟರ್. (ಎಫ್‌ಪಿಬಿ)
4) ಪೋಲೀಸ್ ಸಬ್ ಇನ್ಸ್‌ಪೆಕ್ಟರ್. (ಮಹಿಳಾ)
5) ಸ್ಪೆಷಲ್ ರಿಸರ್ವ್ ಸಬ್ ಇನ್ಸ್‌ಪೆಕ್ಟರ್. (ಕೆಎಸ್‌ಆರ್‌ಪಿ)

ನೇಮಕಾತಿ ಸಮಿತಿಯ ಅಧ್ಯಕ್ಷರಾದ ಡೈರೆಕ್ಟರ್ ಜನರಲ್ (ಅಪರಾಧ ಮತ್ತು ತರಬೇತಿ) ಇವರು ನೇಮಕಾತಿಯ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಡೆಪ್ಯೂಟಿ ಪೋಲೀಸ್ ಸೂಪರಿಂಟೆಂಡೆಂಟ್ ಹುದ್ದೆಗಳಿಗೆ ಸಂಬಂಧಿಸಿದಂತೆ 33 1/3% ಹುದ್ದೆಗಳನ್ನು 1966ರ ಪತ್ರಾಂಕಿತ ಅಧಿಕಾರಿಗಳ ನೇಮಕಾತಿ ನಿಯಮ (ವ್ಯಂದ ಎ ಮತ್ತು ಬಿ ಸ್ಪರ್ಧಾತ್ಮಕ ಪರೀಕ್ಷೆಗಳು) ದಡಿಯಲ್ಲಿ ನೇರ ನೇಮಕಾತಿಯಿಂದಲೂ ಮತ್ತು 66 2/3% ಹುದ್ದೆಗಳನ್ನು ಪೋಲೀಸ್ ಇನ್ಸ್‌ಪೆಕ್ಟರ್ ಹುದ್ದೆಯ ಬಡ್ತಿಯಿಂದ ತುಂಬಲಾಗುವುದು.

ಪೋಲೀಸ್ ಇಲಾಖೆಯಲ್ಲಿ ಐ.ಪಿ.ಎಸ್. ಹುದ್ದೆಗಳನ್ನು ಹೊರತುಪಡಿಸಿದ ಎಲ್ಲಾ ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬಲಾಗುವುದು.

ಇ) ಸಿ.ಆ.ಸು. ಇಲಾಖೆಯ ಮಾರ್ಗದರ್ಶನದಡಿಯಲ್ಲಿ ನೇಮಕಾತಿಯನ್ನು ಮಾಡಲಾಗುವುದು ಹಾಗೂ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಪ್ರಮಾಣವನ್ನು ನಿಗಧಿಪಡಿಸಲಾಗುವುದಿಲ್ಲ.

ಈ) ಇಲ್ಲ.

ಉ) ಈ ಪ್ರಶ್ನೆಗೆ ನೀಡಿರುವ ಉತ್ತರದನ್ವಯ ಉದ್ಭವಿಸುವುದಿಲ್ಲ.